2. ಈ ಕೆಳಗೆ ತಿಳಿಸಿರುವ ಪ್ರದೇಶಗಳಲ್ಲಿ ತುಕ್ಕು ಹಿಡಿದಿರುವ ಕೊಳವೆಗಳನ್ನು ಬದಲಾಯಿಸುವ ಕಾಮಗಾರಿಗಳನ್ನು ಜಲ ಮಂಡಲಿಯು ಕೈಗೆತ್ತಿಕೊಂಡಿದೆ. ಶ್ರೀನಗರ, ಶೇಷಾದ್ರಿಪುರಂ, ಸಂಪಂಗಿರಾಮನಗರ, ಹಳೆ ತರಗುಪೇಟೆ, ಮಾಮೂಲುಪೇಟೆ, ಮಲ್ಲೇಶ್ವರಂ, ವೈಯಾಲಿಕಾವಲ್, ಶ್ರೀರಾಂಪುರಂ, ಜೆ.ಸಿ.ನಗರ, ಗವಿಪುರಂ ಬಡಾವಣೆ, ಬಸವನಗುಡಿ ಟ್ಯಾಂಕ್ ರಸ್ತೆ, ದೊಡ್ಡಿ ಗುಂಟ, ಶಾಂತಿನಗರ, ವಿವೇಕನಗರ, ಜೋಗುಪಾಳ್ಯ, ಮಾಗಡಿ ರಸ್ತೆಯ ಅಡ್ಡ ರಸ್ತೆಗಳು ಇತ್ಯಾದಿ.

3. ಸರ್ಕಾರವು ಸಾಲದ ರೂಪದಲ್ಲಿ ರೂ.70.00 ಲಕ್ಷಗಳನ್ನು 1998-99 ಹಾಗೂ 99-2000ರ ಸಾಲಿನಲ್ಲಿ ಬಿಡುಗಡೆ ಮಾಡಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಬಾಂಡ್ ಯೋಜನೆ.

191 (274)

ಶ್ರೀ ಪಿ.ಸಿ.ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ರಸ್ತೆಗಳ ಅಭಿವೃದ್ಧಿಗಾಗಿ ಬಾಂಡ್‌ಗಳ ಮೂಲಕ ಸಂಗ್ರಹಿಸಲಾದ ಹಣ ಎಷ್ಟು?

ಆ) ಹೀಗೆ ಸಂಗ್ರಹಿಸಲಾದ ಹಣಕ್ಕೆ ಪಾವತಿ ಮಾಡಬೇಕಾದ ಬಡ್ಡಿ ಪ್ರಮಾಣವೆಷ್ಟು? ಇದುವರೆವಿಗೂ ಎಷ್ಟು ಪಾವತಿ ಮಾಡಲಾಗಿದೆ?

ಶ್ರೀ.ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) 125.00 ಕೋಟಿಗಳನ್ನು ಸಂಗ್ರಹಿಸಿದೆ.

ಆ) ಬಡ್ಡಿ ದರ ಶೇಕಡಾ 12. ಇದುವರೆವಿಗೂ ಒಟ್ಟು ರೂ. 34, 12, 50,000.00 ಬಡ್ಡಿ ಪಾವತಿಸಿದೆ.

ಬೀರೂರು ನಗರ ಪೋಲೀಸ್ ಠಾಣೆ ದುರಸ್ತಿ

192 (೩೧೭)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಚಿಕ್ಕಮಗಳೂರು ಜಿಲ್ಲೆ ಬೀರೂರು ನಗರ ಪೊಲೀಸ್ ಠಾಣೆ ತುಂಬಾ ಹಳೆಯದಾಗಿ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

೨. ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೆ?

೩. ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

೧. ಹೌದು

೨. ಬೀರೂರು ನಗರದಲ್ಲಿ ನೂತನ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣಕ್ಕಾಗಿ ಸಾಕಷ್ಟು ಅನುದಾನವನ್ನು ೨೦೦೦-೨೦೦೧ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವಂತೆ ಸೂಕ್ತ ಪ್ರಸ್ತಾವನೆಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿದೆ.

೩. ಲೋಕೋಪಯೋಗಿ ಇಲಾಖೆಯು ೨೦೦೦-೨೦೦೧ ರ ಆಯವ್ಯಯದಲ್ಲಿ ಈ ಕಟ್ಟಡಕ್ಕಾಗಿ ಸಾಕಷ್ಟು ಅನುದಾನವನ್ನು ಒದಗಿಸಿದಲ್ಲಿ, ಈ ಕಾಮಗಾರಿಯನ್ನು ೨೦೦೦-೨೦೦೧ ರಲ್ಲಿ ಆರಂಭಿಸಲಾಗುವುದು.

ರಾಜ್ಯದಲ್ಲಿ ಮದ್ಯ ಮಾರಾಟ.

194 (288)

ಶ್ರೀ ಪಿ.ಹೆಚ್.ಪೂಜಾರ್ (ಬಾಗಲಕೋಟೆ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಮದ್ಯವನ್ನು (ಸಾರಾಯಿ) ಸರ್ಕಾರದ ಏಜೆನ್ಸಿ ಮುಖಾಂತರ ಮಾರಾಟ ಮಾಡುತ್ತಿದೆ; ಆ ತಾಲ್ಲೂಕುವಾರು ಯಾವುವು? (ವಿವರ ನೀಡುವುದು)

ಆ) ಕಳೆದ 3 ಅಬಕಾರಿ ವರ್ಷಗಳಲ್ಲಿ ಸಾರಾಯಿ ಲೈಸೆನ್ಸ್ ಹರಾಜಿನಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು?